## ರಮ್ಯ ಕಲ್ಪನೆಯ ವಾಸ್ತವ!

‘ಸಾವಯವ ಆಹಾರ’ (ಸುಚಿತ್ರಾ ಹೆಗಡೆ, ಅ. 20) ಮುಖಪುಟ ಲೇಖನ ರಮ್ಯ ಕಲ್ಪನೆಯ ವಾಸ್ತವದಂತಿದೆ. ಸುಮಾರು 12 ವರ್ಷಗಳಿಂದ ಸಾವಯವ ಕೃಷಿ ಮಾಡುತ್ತಿರುವ ನಮ್ಮ ಅನುಭವ ಏನೆಂದರೆ ಶೂನ್ಯ ಬಂಡವಾಳದ ಪಿತಾಮಹ ಸುಭಾಷ್ ಪಾಳೇಕರ್ ಅವರ ಕ್ರಾಂತಿಗೆ ಮುಂಚೈ ಕರ್ನಾಟಕದ ಸಾವಿರಾರು ರೈತರು ಕೈ ಜೋಡಿಸಿ, ರಾಸಾಯನಿಕಗಳಿಂದ ಮುಕ್ತವಾದ ಕೃಷಿ ಮಾಡಿ ಯಶಸ್ವಿ ಆಗಿದ್ದಾರೆ. ದಶಕಗಳ ಹಿಂದೆ ಇದೊಂದು ಕ್ರಾಂತಿ ಆಗಿತ್ತು. ಆದರೆ ಈಗ ಇದು ಬರೀ ಪ್ರತಿಷ್ಠೆ ಆಗುತ್ತಿದೆ. ಗ್ರಾಹಕರ ‘ಬೇಕುಗಳು’ ಮಿತಿ ಇಲ್ಲದಂತೆ ಮುಗಿಲು ಮುಟ್ಟುತ್ತಿದೆ. ತಾಜಾ ಹಾಗೂ ಸಾವಯವ ಉತ್ಪನ್ನಗಳ ವ್ಯತ್ಯಾಸ ತಿಳಿಯದೆ ಗ್ರಾಹಕ ಮೂರ್ಖನಾಗುತ್ತಿದ್ದಾನೆ. ವಂಚನೆಯ ಜಾಲದಲ್ಲಿ ಆನ್‌ಲೈನ್ ಕಾರ್ಪೊರೇಟ್ ಕಂಪನಿಗಳ ಕೊಡುಗೆ ಅಪಾರ.



ಸಾವಯವ ಜೀವನಶೈಲಿ ಎಂದರೆ ವರ್ಣರಂಜಿತವಾದ ಹಸಿರು ಮನೆಯಲ್ಲಿ ಬೆಳೆದ ತರಕಾರಿ ಅಲ್ಲ. ಕೆಂಪು ಅಕ್ಕಿ, ಗಾಣದ ಎಣ್ಣೆ, ಶುದ್ಧ ಬೆಲ್ಲ, ತುಪ್ಪ ತಿಂದು ದೇಶೀಯ ಆಹಾರ ಪದ್ಧತಿಯನ್ನು ನಾವು ಪಾಲಿಸಿದರೆ ರೈತ ನಿಜಕ್ಕೂ ನಮಗೆ ರಾಸಾಯನಿಕಗಳಿಂದ ಮುಕ್ತವಾದ ಆಹಾರ ನೀಡಬಲ್ಲ.

—ಸಿ.ಆರ್. ಇಂದಿರಾ ಪ್ರಿಯದರ್ಶಿನಿ, ಬೆಂಗಳೂರು

ಮುಖಪುಟ ಲೇಖನ ಬಹಳ ಅದ್ಭುತವಾಗಿ ಮೂಡಿಬಂದಿದೆ. ಬಹಳಷ್ಟು ವಿಷಯಗಳನ್ನು ತಿಳಿಸಿಕೊಟ್ಟಿದ್ದಾರೆ. ಅಡೆತಡೆ ನಡುವೆಯೂ ಸಾವಯವ ಕೃಷಿ ಬೆಳೆಯುತ್ತಿರುವುದು ಮೆಚ್ಚುವಂಥದ್ದು. ರೈತರೊಂದಿಗೆ ನಮ್ಮ ಸರ್ಕಾರವೂ ಕೈಜೋಡಿಸಿದಲ್ಲಿ ಜನಸಾಮಾನ್ಯರು ಸಂತಸ ಮತ್ತು ಆರೋಗ್ಯದಿಂದ ಇರುವುದರಲ್ಲಿ ಎರಡು ಮಾತಿಲ್ಲ.

—ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

## ಜಗಳಗಂಟಿ ಮರ

‘ಜಗಳಗಂಟಿ ಮರ’ (ವಿನು ಗಂಗೆ ಅ. 20) ಲೇಖನ ಓದಿ ಮೈ ನವಿರೇಳಿತು. ಇಂತಹ ಒಂದು ಮರ ಮತ್ತು ಅದಕ್ಕೊಂದು ಕಥೆ ಇದೆ ಎಂದು ಗೊತ್ತೇ ಇರಲಿಲ್ಲ. ಮೂಢನಂಬಿಕೆ ಮತ್ತು ಮೂಲ ನಂಬಿಕೆಗಳನ್ನು ಗುರುತಿಸಿ, ಸರಿಯಾದ ಜೀವನ ಪಥದಲ್ಲಿ ಸಾಗಲು ಇಂತಹ ಬರಹಗಳು ದಾರಿದೀಪವಾಗಿವೆ.

—ಮಾತಾ ಎಂ.ಕೆ.

ಮನುಷ್ಯರ ಸಹವಾಸದಿಂದ ದೂರವಿದ್ದು ಜಗಳಗಂಟಿ ಎಂಬ ನಾಮ ಪಟ್ಟಿ ಹೊಂದಿರುವ ಈ ಮರ ತನ್ನ ಸಂತತಿ ಮುಂದುವರಸಲಿ ಎಂದು ಆಶಿಸೋಣ.

—ಭಾರತೀ ಗಂಗಾಧರ್, ಬೆಂಗಳೂರು

## ಮೌಲಿಕ ಸಂದರ್ಶನ

ಕರ್ನಾಟಕ ಲೇಖಕಿಯರ ಸಂಘದ ನೂತನ ಅಧ್ಯಕ್ಷೆ ಎಚ್.ಎಲ್. ಪುಷ್ಪ ಸಂದರ್ಶನ (ರಾಘವೇಂದ್ರ ಕೆ., ಅ. 20) ಮೌಲಿಕವಾಗಿದೆ. ‘ಎಡ–ಬಲ ಎನ್ನುವುದಕ್ಕಿಂತ ಯಾರಿಗೆ ಅವಕಾಶಗಳು ಸಿಕ್ಕಿಲ್ಲ, ಅವರನ್ನು ಗುರುತಿಸುವುದು ನಮ್ಮ ಕೆಲಸ’ ಎಂಬ ಅವರ ನೇರ ಮಾತು ಬಹಳ ಹಿಡಿಸಿತು. ಕನ್ನಡದ ಓದು ಕಡಿಮೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಮುಂದಿನ ತಲೆಮಾರಿನ ಲೇಖಕಿಯರನ್ನು ಬೆಳೆಸುವ ಕೆಲಸ ಇವರಿಂದಾಗಲೆಂದು ಆಶಿಸುತ್ತೇನೆ.

—ಎಚ್. ಸಿ. ಸೋಮಶೇಖರ, ಎಲೆಕೊಡಿಗೆಹಳ್ಳಿ

‘ಕಲೇಸಂ’ ಲೇಖನ ಗಮನಾರ್ಹವಾದುದು. ಸಾಹಿತಿಯ ಸಮಾಜದ ನಾವಿಕನಂತಿರಬೇಕು. ಕಲೇಸಂ ಈ ನಿಟ್ಟಿನಲ್ಲಿ ಶ್ರಮಿಸಿ ಆಸಕ್ತ ಲೇಖಕಿಯರಿಗೆ ವೇದಿಕೆಯನ್ನೊದಗಿಸುವುದರ ಮೂಲಕ ಸಮಾಜದಲ್ಲಿ ಸಮಸ್ಯೆಗಳೆಡೆ ಚಿಂತಿಸಿ, ಸ್ವಸ್ಥ ಸಮಾಜ ನಿರ್ಮಾಣದ ಸಾರಥ್ಯವನ್ನು ವಹಿಸಿದಲ್ಲಿ ಅಭಿನಂದನಾರ್ಹ.

—ಸತ್ಯವತಿ, ಕುಳಿಹಿತ್ಲು




## ಸಾಧನೆಯ ಶಿಖರ!

‘ಹೆಸರಿನಲ್ಲಿ ಗುಬ್ಬಿ ಸಾಧನೆಯಲ್ಲಿ ಗರುಡ’ (ನಾರಾಯಣ ರಾಯಚೂರು, ಅ. 20) ಲೇಖನ ಓದಿ ತುಂಬಾ ಸಂತೋಷವಾಯಿತು. ಗುಬ್ಬಿ ವೀರಣ್ಣನವರನ್ನು ನೆನಪಿಸಿದ್ದಕ್ಕೆ ಧನ್ಯವಾದಗಳು. ಒಬ್ಬ ಕೆಲಸದಾಳು ಮಾಲೀಕನಾಗಿದ್ದು ಇತಿಹಾಸ. ಗುಬ್ಬಿ ವೀರಣ್ಣನವರು ನಾಟಕ ರಂಗಕ್ಕೆ ಸೀಮಿತವಾಗದೆ, ಚಲನಚಿತ್ರ ರಂಗದಲ್ಲಿಯೂ ತಮ್ಮ ಛಾಪನ್ನು ಮೂಡಿಸಿದವರು. ಚಿತ್ರರಂಗಕ್ಕೆ ಅವರ ಕೊಡುಗೆ ಅಪಾರ. ರಾಜ್‌ಕುಮಾರ್, ಜಿ.ವಿ. ಅಯ್ಯರ್, ಬಾಲಕೃಷ್ಣ, ನರಸಿಂಹರಾಜು ಮತ್ತು ಅನೇಕ ನಾಯಕ ನಟರನ್ನು ನೀಡಿದ್ದಾರೆ. ಅವರ ಕುಟುಂಬ ಕೂಡ ನಾಟಕ ಮತ್ತು ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದೆ. ಇನ್ನು ನಾಟಕ ರಂಗಕ್ಕೆ ವೀರಣ್ಣನವರು ಜೀವನವನ್ನೇ ಮುಡುಪಾಗಿಟ್ಟಿದ್ದರು. ಅವರ ಉಸಿರೇ ನಾಟಕ ರಂಗವಾಗಿತ್ತು.

—ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ

ಗುಬ್ಬಿ ಲೇಖನ ಬಾನಿನಲ್ಲಿ ಅತಿ ಎತ್ತರದಲ್ಲಿ ಹಾರಾಡುವಂತಿತ್ತು. ಹಲವಾರು ಪ್ರತಿಭೆಗಳನ್ನು ಬೆಳಕಿಗೆ ತಂದ ಗುಬ್ಬಿ ಕಂಪನಿ ಒಂದು ವಿಶ್ವವಿದ್ಯಾಲಯವೇ ಸರಿ.

—ಬಿ. ರಾಜ್ ಕುಮಾರ್

ಗುಬ್ಬಿ ಕಂಪನಿ ಏಷ್ಯಾ ಖಂಡದಲ್ಲಿ ಅತ್ಯಧಿಕ ಕಾಲ ಬಾಳಿದ ನಾಟಕ ಮಂಡಳಿ ಎಂಬ ನಮ್ಮ ಹೆಮ್ಮೆ ಸಹ ಈ ಸಂದರ್ಭದಲ್ಲಿ ಸ್ಮರಣೀಯ.

—ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

### ವಿಶ್ವವಿಖ್ಯಾತ ರಂಗನಟ

ಕನ್ನಡ ರಂಗಭೂಮಿಯಲ್ಲಿ ಮಿಂಚಿ, ಮೂಕಿ ಚಿತ್ರಗಳನ್ನೂ ನಿರ್ಮಿಸಿ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾಗಿ ಐದು ದಶಕಗಳ ಹಿಂದೆ ನಮ್ಮನ್ನಗಲಿದ ಚನ್ನಬಸವೇಶ್ವರ ನಾಟಕ ಮಂಡಳಿಯ ಮಾಲೀಕ ಗುಬ್ಬಿ ವೀರಣ್ಣನವರ ಸಾಧನೆಯ ಸಮಗ್ರ ಚಿತ್ರಣ ನೀಡಿದೆ.

—ಪಿ. ಜಯವಂತ ಪೈ, ಕುಂದಾಪುರ

ಗುಬ್ಬಿ ವೀರಣ್ಣನವರ ಪ್ರತಿಭೆ ಅಗಣಿತ. ಅವರು ಹೃದಯ ಸಂಪನ್ನ, ವಿನಯವಂತ. ಆಗಿನ ಕಾಲದ ಗುಬ್ಬಿ ಕಂಪನಿಯ ನಿರ್ಮಾಣದ ಸಿನಿಮಾ ಒಂದರ ಪೋಸ್ಟರ್ ನೋಡಿ ಖುಷಿಯಾಯಿತು.

—ಬಸಪ್ಪ ಎಸ್. ಮುಳ್ಳೂರ ಹಲಗತ್ತಿ

## ಫಾಲ್ಕೆ ನಕ್ಷತ್ರ!

‘ಆಶಾ ಮುಷ್ಟಿಯಲ್ಲಿ ಫಾಲ್ಕೆ ನಕ್ಷತ್ರ’ (ವಿಶಾಖ ಎನ್., ಅ. 13) ಬರಹದಲ್ಲಿ ಬಾಲಿವುಡ್ ತಾರೆ, ಫಾಲ್ಕೆ ಪ್ರಶಸ್ತಿ ವಿಜೇತೆ ಆಶಾ ಪಾರೇಖ್ ಅವರ ಕಿರು ಪರಿಚಯ ಚೆನ್ನಾಗಿ ಮೂಡಿಬಂದಿದೆ. ಅವರ ನೃತ್ಯವೂ ತುಂಬಾ ಚೆನ್ನಾಗಿದೆ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಮಾರ್ಮಿಕ ಬರಹ

‘ನೋವಿಗೆ ಮುಲಾಮು, ಆನಂದ ಭಾವಿನಿ’ (ಎನ್.ಎಸ್. ಅ. 20) ಬರಹ ಮಾರ್ಮಿಕವಾಗಿದೆ. ಈ ನಾಟಕವನ್ನು ನಿರ್ದೇಶಿಸಿದ್ದು ಶ್ರೀಪಾದ ಭಟ್ ಅವರು.

—ಪಾರ್ವತಿ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in